ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ವಿಜಯ ಸಿಂಗ್ (ಸ್ಥಳಿಯ ಸಂಸ್ಥಗಳ ಕ್ಷೇತ್ರ)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 237 (195)

ಉತ್ತರಿಸಬೇಕಾದ ದಿನಾಂಕ : 22.09.2020

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರೈತರ ಸಾಲ ಮನ್ನಾ ವಿಷಯದಲ್ಲಿ ಜಿಲ್ಲಾ ಬ್ಯಾಂಕ್‌ಗಳೊಂದಿಗೆ ಸಹಕಾರ ಇಲಾಖೆ ಯಾವ ಪಾತ್ರ ವಹಿಸುತ್ತಿದೆ;	ಸಹಕಾರಿ ಸಂಸ್ಥೆಗಳಲ್ಲಿನ ಕುಟುಂಬಕ್ಕೆ ರೂ.1.00 ಲಕ್ಷಗಳ ಸಾಲ ಮನ್ನಾ ಯೋಜನೆಯಲ್ಲಿ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ ಅಭಿವೃದ್ಧಿ ಪಡಿಸಿದ ಸಾಲ ಮನ್ನಾ ತಂತ್ರಾಂಶದಲ್ಲಿ ಸಹಕಾರ ಸಂಘಗಳು/ಜಿಲ್ಲಾ ಬ್ಯಾಂಕುಗಳು ತಮ್ಮ ಸಂಸ್ಥೆಗಳಲ್ಲಿ ರೈತರು ಪಡೆದ ಸಾಲದ ವಿವರವನ್ನು ಕಾಲಂ 52 ರ ನಮೂನೆಯಲ್ಲಿ ಅಳವಡಿಸಲು ಮತ್ತು ರೈತರಿಂದ ಆಧಾರ್, ಪಡಿತರ ಚೀಟಿ ಮತ್ತು ಆರ್.ಟಿ.ಸಿ. ಗಳನ್ನು ಸ್ವಯಂ ದೃಢೀಕರಣ ಪತ್ರದಲ್ಲಿ ಪಡೆದು ಈ ಮಾಹಿತಿಯನ್ನೂ ಅಳವಡಿಸುವ ಕಾರ್ಯವನ್ನು ಸಹಕಾರ ಇಲಾಖೆಯು ನಿರ್ವಹಣೆ ಮಾಡುತ್ತಿರುತ್ತದೆ. ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ ನೀಡುವ ಅರ್ಹ ರೈತರ ಪಟ್ಟಿಗೆ ಅಪೆಕ್ಸ್ ಬ್ಯಾಂಕಿನಿಂದ NEFT ಮೂಲಕ ರೈತರ ಉಳಿತಾಯ ಖಾತೆಗೆ ಸಾಲ ಮನ್ನಾ ಬಿಡುಗಡೆ ಮಾಡಲಾಗುತ್ತಿದೆ.
ಆ)	ರೈತರಿಗೆ ಸಾಲ ಮನ್ನಾ, ಸ್ಥಳೀಯ ಸಂಸ್ಥೆಗಳಿಗೆ ಸಾಲ ಮತ್ತಿತರ ಸರ್ಕಾರದ ಯೋಜನೆಗಳನ್ನು ಜಾರಿಗೊಳಿಸುವಲ್ಲಿ ಸರ್ಕಾರ ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆ;	ಸಹಕಾರ ಸಂಘಗಳು ಈವರೆಗೆ 16.41 ಲಕ್ಷ ರೈತರ ರೂ.7637.29 ಕೋಟಿ ಮೊತ್ತದ ಸಾಲವನ್ನು ಮನ್ನಾ ಮಾಡಲಾಗಿದ್ದು, ಶೇ.90 ರಷ್ಟು ಸಾಧನೆಯನ್ನು ಮಾಡಿರುತ್ತದೆ. ಶೂನ್ಯ ಬಡ್ಡಿ ದರ ಅನ್ವಯವಾಗುವಂತೆ ಬೆಳೆ ಸಾಲ ವಿತರಿಸುವ ಯೋಜನೆಯಲ್ಲಿ 2020-21 ನೇ ಸಾಲಿಗೆ ಆಗಸ್ಟ್ ಅಂತ್ಯಕ್ಕೆ 11.24 ಲಕ್ಷ ರೈತರಿಗೆ ರೂ.7234.38 ಕೋಟಿ ಸಾಲ ವಿತರಿಸಲಾಗಿದ್ದು, ಆಗಸ್ಟ್ ಗುರಿಗೆ ಎದುರಾಗಿ ಶೇ.100 ರಷ್ಟು ಸಾಧನೆ ಮಾಡಲಾಗಿದೆ. ಕೋವಿಡ್-19 ಹಿನ್ನೆಲೆಯಲ್ಲಿ ನಬಾರ್ಡ್‌ನಿಂದ Special Liquidity fund ಅಡಿಯಲ್ಲಿ ಹೆಚ್ಚುವರಿಯಾಗಿ ರೂ.1700 ಕೋಟಿಗಳ ಸಾಲ ವನ್ನು ಜಿಲ್ಲಾ ಬ್ಯಾಂಕುಗಳಿಗೆ ನೀಡಲಾಗಿದೆ. ಶೇ.3 ರ ಬಡ್ಡಿದರ ಅನ್ವಯವಾಗುವಂತೆ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ ವಿತರಿಸುವ ಯೋಜನೆಯಲ್ಲಿ 2020-21 ನೇ ಸಾಲಿಗೆ ಆಗಸ್ಟ್ ಅಂತ್ಯಕ್ಕೆ 0.08 ಲಕ್ಷ ರೈತರಿಗೆ ರೂ.185.31 ಕೋಟಿ ಸಾಲ ವಿತರಿಸಲಾಗಿದೆ.
ಇ)	ಸಂಘ ಸಂಸ್ಥೆಗಳ ನೋಂದಣಿ ವಿಷಯದಲ್ಲಿ ಸಾರ್ವಜನಿಕರಿಗೆ ಅನ್ಯಾಯವಾಗದಂತೆ ಸರ್ಕಾರದಿಂದ ಯಾವ ಕ್ರಮವಹಿಸಲಾಗುತ್ತಿದೆ?	ಸಂಘ ಸಂಸ್ಥೆಗಳು ನೋಂದಣಿ ಮತ್ತು ನವೀಕರಣ ಮಾಡಲು ಇರುವ ತೊಂದರೆ ತಪ್ಪಿಸಲು ತಂತ್ರಾಂಶ ಅಭಿವೃದ್ಧಿ ಪಡಿಸಲಾಗಿದೆ.

ಕಡತ ಸಂಖ್ಯೆ: ಸಿಒ 334 ಸಿಎಲ್‌ಎಸ್ 2020

ಎಸ್.ಟಿ. ಸೋಮಶೇಖರ್

(ಎಸ್.ಟಿ. ಸೋಮಶೇಖರ್)

ಸಹಕಾರ ಸಚಿವರು